| | ರಾಜ್ಯಗಳು | 2010 | 2014 |
|---|---|---|---|
| ಪಶ್ಚಿಮ ಘಟ್ಟ | ಕರ್ನಾಟಕ | 300 | 406 |
| | ಕೇರಳ | 71 | 138 |
| | ತಮಿಳುನಾಡು | 163 | 229 |
| | ಗೋವಾ | — | 05 |
| ಮಧ್ಯ ಭಾರತ ಪೂರ್ವ ಘಟ್ಟ | ಆಂಧ್ರ ಪ್ರದೇಶ | 72 | 68 |
| | ಛತ್ತೀಸ್‌ಘಡ | 26 | 46 |
| | ಮಧ್ಯ ಪ್ರದೇಶ | 257 | 308 |
| | ಮಹಾರಾಷ್ಟ್ರ | 169 | 190 |
| | ಒಡಿಶಾ | 32 | 28 |
| | ರಾಜಸ್ಥಾನ | 36 | 45 |
| | ಜಾರ್ಖಂಡ | 10 | 3 |
| ಶಿವಾಲಿಕ್– ಗಂಗಾ ನದಿ ಪ್ರದೇಶ | ಉತ್ತರಾ ಖಂಡ | 227 | 340 |
| | ಉತ್ತರ ಪ್ರದೇಶ | 118 | 117 |
| | ಬಿಹಾರ | 8 | 28 |
| ಈಶಾನ್ಯ ಪ್ರದೇಶ | ಅಸ್ಸಾಂ | 143 | 167 |
| | ಅರುಣಾಚಲ ಪ್ರದೇಶ | 5 | 3 |
| | ಮಿಜೋರಾಂ | — | 3 |
| | ಪಶ್ಚಿಮ ಬಂಗಾಳ (ಉ) | — | 3 |
| | ಈಶಾನ್ಯ ಬೆಟ್ಟ ಬ್ರಹ್ಮಪುತ್ರ | 148 | 201 |
| | ಸುಂದರ ಬನ್ | 69 | 78 |

ವರದಿಗಳು ಬರುತ್ತಲೇ ಇವೆಯಾದರೂ, ಕಾಡಿನಂಚಿನ ಜನತೆ ಹುಲಿಯನ್ನು ದ್ವೇಷಿಸುವ ಮಟ್ಟಕ್ಕೆ ಹೋಗಿಲ್ಲ ಎಂದೇ ಹೇಳಬಹುದು.

ಈಗಿರುವ ಗಣತಿಯ ವರದಿ ಇದೆಲ್ಲವನ್ನೂ ಹೇಳುವುದಷ್ಟೇ ಅಲ್ಲದೆ, ಮುಂದೆ ನಾವೇನು ಮಾಡಬೇಕು ಎಂಬುವುದನ್ನು ಸೂಚಿಸುತ್ತದೆ. ಮುಂಬರುವ ದಿನಗಳಲ್ಲಿ ಹೆಚ್ಚಾದ ಹುಲಿಗಳು ಹೊಸ ಆವಾಸವನ್ನು ಹುಡುಕಿಕೊಂಡು, ಹೊಸ ಕಾಡುಗಳಿಗೆ ವಲಸೆ ಹೋಗಬಹುದು. ಗೋವಾ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ 5 ಹುಲಿಗಳು ಪತ್ತೆಯಾಗಿರುವುದು ಇದಕ್ಕೆ ಉದಾಹರಣೆ. ಆದುದರಿಂದ ಹೆಚ್ಚಾದ ಹುಲಿಗಳಿಗೆ ಹೆಚ್ಚಿನ ಆವಾಸವನ್ನು ಒದಗಿಸಿ ಕೊಡುವುದು ಅನಿವಾರ್ಯವಾಗಿದೆ. ಅವುಗಳ ಛಿದ್ರಗೊಂಡ ನೆಲೆಗಳನ್ನು ಸಾಧ್ಯವಾದ ಕಡೆಯಲ್ಲೆಲ್ಲಾ ಜೋಡಿಸುವ ಅವಶ್ಯಕತೆ ಇದೆ.

ಈಗಿರುವ 3,80,000 ಚ.ಕಿ.ಮೀ. ಸಂರಕ್ಷಿತ ಪ್ರದೇಶವನ್ನು 4,00,000 ಚ.ಕಿ.ಮೀ.ಗೆ ವಿಸ್ತರಿಸಿದರೆ ಶೇಕಡಾ 90ರಷ್ಟು ಹುಲಿಗಳಿಗಾದರೂ ಆವಾಸ ಒದಗಿಸಬಹುದು ಎನ್ನುವುದು ಹುಲಿ ತಜ್ಞ ಡಾ. ಉಲ್ಲಾಸ ಕಾರಂತರ ಅಭಿಪ್ರಾಯ. ಕರ್ನಾಟಕದ ಅಣಶಿ–ದಾಂಡೇಲಿ, ಕುದುರೆಮುಖ, ಮಹದೇಶ್ವರ ಬೆಟ್ಟ, ಭೀಮಗಡ, ಸೋಮೇಶ್ವರ ಮತ್ತು ಮೂಕಾಂಬಿಕಾ



ಚಿತ್ರ: ಎಚ್.ಸತೀಶ್

